# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** 2013-14ನೇ ಸಾಲಿನ NRDWP ಯೋಜನೆಯಡಿ ರಾಯಚೂರು ತಾಲ್ಲೂಕಿನ ವಿವಿಧ ಗ್ರಾಮಗಳಲ್ಲಿ ಶಾಲೆಗಳಿಗೆ ಕುಡಿಯುವ ನೀರಿನ ಸರಬರಾಜು ಕಾಮಗಾರಿಗಳಲ್ಲಿ ಅವ್ಯವಹಾರವೆಸಗಿ ಸರ್ಕಾರದ ಹಣವನ್ನು ದುರುಪಯೋಗಪಡಿಸಿಕೊಂಡ ಅಧಿಕಾರಿ/ನೌಕರರ ವಿರುದ್ಧದ ಲೋಕಾಯುಕ್ತ ವಿಚಾರಣೆ - ದಂಡನೆ ವಿಧಿಸಿ ಅಂತಿಮ ಆದೇಶ ಹೊರಡಿಸುವ ಬಗ್ಗೆ .

**ಓದಲಾಗಿದೆ:**

1. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 170 ಇಎನ್‌ಕ್ಯೂ 2016, ದಿನಾಂಕ:10.01.2017
2. ನಿಬಂಧಕರು, ಲೋಕಾಯುಕ್ತ, ಬೆಂಗಳೂರು, ಇವರ ವಿಚಾರಣಾ ಪತ್ರ ಸಂಖ್ಯೆ:ಉಪಲೋಕ್-1/ಡಿಇ-146&615/2017/ಎ.ಆರ್.ಇ-16, ದಿನಾಂಕ: 05.02.2021
3. ಮಾನ್ಯ ಉಪಲೋಕಾಯುಕ್ತ ರವರ ಶಿಫಾರಸ್ಸು ವರದಿ ಸಂಖ್ಯೆ: UPLOK-1/DE/146 & 615/2017/ARE-16; ದಿನಾಂಕ: 01.02.2021
4. ಸರ್ಕಾರದ 2ನೇ ಕಾರಣ ಕೇಳುವ ನೋಟೀಸ್ ಸಂಖ್ಯೆ: ಗ್ರಾಅಪ/24/ಇಎನ್‌ಕ್ಯೂ/2021, ದಿನಾಂಕ:09.04.2021
5. ಶ್ರೀ ಬಾಬುರಾವ್, ಕಿರಿಯ ಇಂಜಿನಿಯರ್, ಶ್ರೀ ಮೊಹಮ್ಮದ್ ಮೋಸಿನ್, ಕಿರಿಯ ಇಂಜಿನಿಯರ್, ಶ್ರೀ ಶರಣೇಗೌಡ, ಸಹಾಯಕ ಇಂಜಿನಿಯರ್ & ಶ್ರೀ ಜಿ.ಎನ್.ಪ್ರಕಾಶ, ಸ.ಕಾ.ಇಂ. ಇವರುಗಳ ಲಿಖಿತ ವಿವರಣೆ ದಿನಾಂಕ:30.06.2021, 10.08.2021 & 23.07.2021

****

<u>ಪ್ರಸ್ತಾವನೆ:</u>-

ರಾಯಚೂರು ತಾಲ್ಲೂಕಿನ ವಿವಿಧ ಗ್ರಾಮಗಳಲ್ಲಿ ಉರ್ದು ಶಾಲೆಗಳು ಇಲ್ಲದಿದ್ದರೂ ಸಹ ಉರ್ದು ಶಾಲೆಗಳಲ್ಲಿ ಕುಡಿಯುವ ನೀರು ಸರಬರಾಜು ಕಾಮಗಾರಿಗಳನ್ನು ಮಾಡಲಾಗಿದೆ ಎಂದು ತೋರಿಸಿ ಲಕ್ಷಾಂತರ ರೂ.ಗಳನ್ನು ದುರುಪಯೋಗಪಡಿಸಿಕೊಂಡಿರುವ ಆರೋಪಗಳಿಗೆ ಸಂಬಂಧಿಸಿದಂತೆ,ಶ್ರೀ ಬಸವರಾಜ್ ಗಾರಲದಿನ್ನಿ ಬಿನ್ ಮಲ್ಲಯ್ಯ, ಗಾರಲದಿನ್ನಿ ಗ್ರಾಮ, ರಾಯಚೂರು ಇವರು ಮಾನ್ಯ ಲೋಕಾಯುಕ್ತ ಕಛೇರಿಯಲ್ಲಿ ಸಲ್ಲಿಸಿದ ದೂರಿನ ಮೇರೆಗೆ ಲೋಕಾಯುಕ್ತ ಕಚೇರಿಯ ತನಿಖಾ ವಿಭಾಗವು ತನಿಖೆ ಕೈಗೊಂಡಿದ್ದು, ಸದರಿ ತನಿಖಾ ವರದಿಯನ್ನು ಪರಿಶೀಲಿಸಿ ಈ ಕೆಳಕಂಡ ಆಪಾದಿತರುಗಳ ವಿರುದ್ಧದ ಆರೋಪಗಳ ಬಗ್ಗೆ ವಿವರವಾದ ಇಲಾಖಾ ವಿಚಾರಣೆ ನಡೆಸಲು ಪ್ರಕರಣವನ್ನು ತಮಗೆ ವಹಿಸುವಂತೆ ಮಾನ್ಯ ಉಪಲೋಕಾಯುಕ್ತರವರು ದಿನಾಂಕ:09.12.2016 ರಂದು ಲೋಕಾಯುಕ್ತ ಕಾಯ್ದೆ ಕಲಂ 12(3)ರಂತೆ ಸರ್ಕಾರಕ್ಕೆ ವರದಿ ಸಲ್ಲಿಸಿದ್ದರು.

1. ಶ್ರೀ ಬಿ.ಆರ್.ಗೌಡೂರ, ಹಿಂದಿನ ಪ್ರಭಾರಿ ಕಾ.ಇಂ., ಗ್ರಾ.ಕು.ನೀ&ನೈ ವಿಭಾಗ, ರಾಯಚೂರು.

2. ಶ್ರೀ ಮಲ್ಲಿಕಾರ್ಜುನ ಸಾಹು, ಹಿಂದಿನ ಸ.ಕಾ.ಇಂ., ಪಂ.ರಾ.ಇಂ. ವಿಭಾಗ, ರಾಯಚೂರು.
3. ಶ್ರೀ ಜಿ.ಎನ್.ಪ್ರಕಾಶ್, ಹಿಂದಿನ ಸ.ಕಾ.ಇಂ., ಪಂ.ರಾ.ಇಂ. ಉಪವಿಭಾಗ, ರಾಯಚೂರು.
4. ಶ್ರೀ ಶರಣೇಗೌಡ, ಹಿಂದಿನ ಕಿ.ಇಂ., ಪಂ.ರಾ.ಇಂ. ವಿಭಾಗ, ರಾಯಚೂರು.
5. ಶ್ರೀ ಮಹಮ್ಮದ್ ಮೋಸಿನ್, ಹಿಂದಿನ ಕಿ.ಇಂ., ಪಂ.ರಾ.ಇಂ. ವಿಭಾಗ, ರಾಯಚೂರು.
6. ಶ್ರೀ ಬಾಬುರಾವ್, ಹಿಂದಿನ ಕಿ.ಇಂ., ಪಂ.ರಾ.ಇಂ. ವಿಭಾಗ, ರಾಯಚೂರು.
7. ಶ್ರೀ ರಾಮಚಂದ್ರ, ಕ್ಷೇತ್ರ ಶಿಕ್ಷಣಾಧಿಕಾರಿ, ರಾಯಚೂರು.
8. ಶ್ರೀಮತಿ ಸುಜಾತ.ಎಂ., ತರಬೇತಿ ಪದವೀಧರ ಶಿಕ್ಷಕಿ, ಸ.ಹಿ.ಪ್ರಾ.ಶಾಲೆ, ಜಾಗೀರ್ ವೆಂಕಟಾಪುರ, ರಾಯಚೂರು.

ಸದರಿ ವರದಿಯನ್ನು ಪರಿಶೀಲಿಸಲಾಗಿ, ಮೇಲ್ಕಂಡ 7 ನೇ ಮತ್ತು 8 ನೇ ಎದುರುದಾರದ ಶ್ರೀ ರಾಮಚಂದ್ರ, ಕ್ಷೇತ್ರ ಶಿಕ್ಷಣಾಧಿಕಾರಿ, ರಾಯಚೂರು ಹಾಗೂ ಶ್ರೀಮತಿ ಸುಜಾತ ಎಂ. ಪದವೀಧರ ಶಿಕ್ಷಕಿ, ಇವರು ಶಿಕ್ಷಣ ಇಲಾಖೆಗೆ ಸೇರಿದ ಅಧಿಕಾರಿ/ನೌಕರರಾಗಿದ್ದು ಅವರುಗಳ ವಿರುದ್ಧದ ಪ್ರಸ್ತಾವನೆಯನ್ನು ಮುಂದಿನ ಕ್ರಮಕ್ಕಾಗಿ ಶಿಕ್ಷಣ ಇಲಾಖೆಗೆ ಕಳುಹಿಸಲಾಗಿರುತ್ತದೆ.

2013-14ನೇ ಸಾಲಿನ ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರಿನ ಯೋಜನೆಯಡಿ ರಾಯಚೂರು ತಾಲ್ಲೂಕಿನ ಅರಳಿಬೆಂಚಿ, ಚಾಲಿಬೆಂಚಿ, ಮೂಡಲದಿನ್ನಿ, ಪತ್ತೆಪೂರು, ಜಾಗೀರ್ ವೆಂಕಟಾಪುರ ಮತ್ತು ಅರಳಪ್ಪನ ಹುಡಾ ಗ್ರಾಮಗಳಲ್ಲಿ ಶಾಲೆಗಳಿಗೆ ಕುಡಿಯುವ ನೀರಿನ ಸರಬರಾಜು ಕಾಮಗಾರಿಗಳಲ್ಲಿ ಅವ್ಯವಹಾರ ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದ ಹಿನ್ನಲೆಯಲ್ಲಿ ಈ ಕೆಳಕಂಡ ಆಪಾದಿತರುಗಳ ಆರೋಪಗಳ ಕುರಿತು ವಿವರವಾದ ಇಲಾಖಾ ವಿಚಾರಣೆಯನ್ನು ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು-1957ರ ನಿಯಮ 11ರಡಿ ನಡೆಸಲು ಸದರಿ ನಿಯಮಗಳ ನಿಯಮ 14(ಎ)ರನ್ವಯ ಪ್ರಕರಣವನ್ನು ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ದಿನಾಂಕ:10.01.2017ರ ಸರ್ಕಾರದ ಆದೇಶದಲ್ಲಿ ಮಾನ್ಯ ಉಪಲೋಕಾಯುಕ್ತರವರಿಗೆ ವಹಿಸಲಾಗಿತ್ತು.

1. ಶ್ರೀ ಜಿ.ಎನ್.ಪ್ರಕಾಶ್, ಹಿಂದಿನ ಸ.ಕಾ.ಇಂ., ಪಂ.ರಾ.ಇಂ. ಉಪವಿಭಾಗ, ರಾಯಚೂರು.
2. ಶ್ರೀ ಬಿ.ಆರ್.ಗೌಡೂರ, ಹಿಂದಿನ ಪ್ರಭಾರಿ ಕಾ.ಇಂ., ಗ್ರಾ.ಕು.ನೀ&ನೈ ವಿಭಾಗ, ರಾಯಚೂರು.
3. ಶ್ರೀ ಮಲ್ಲಿಕಾರ್ಜುನ ಸಾಹು, ಹಿಂದಿನ ಸ.ಕಾ.ಇಂ., ಪಂ.ರಾ.ಇಂ. ವಿಭಾಗ, ರಾಯಚೂರು.
4. ಶ್ರೀ ಶರಣೇಗೌಡ, ಹಿಂದಿನ ಕಿ.ಇಂ., ಪಂ.ರಾ.ಇಂ. ವಿಭಾಗ, ರಾಯಚೂರು.
5. ಶ್ರೀ ಮಹಮ್ಮದ್ ಮೋಸಿನ್, ಹಿಂದಿನ ಕಿ.ಇಂ., ಪಂ.ರಾ.ಇಂ. ವಿಭಾಗ, ರಾಯಚೂರು.
6. ಶ್ರೀ ಬಾಬುರಾವ್, ಹಿಂದಿನ ಕಿ.ಇಂ., ಪಂ.ರಾ.ಇಂ. ವಿಭಾಗ, ರಾಯಚೂರು.

ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ಮೇಲೆ ಓದಲಾದ ಕ್ರಮಾಂಕ (2) ರ ದಿನಾಂಕ:05.02.2021 ರ ಪತ್ರದೊಂದಿಗೆ ವಿಚಾರಣಾ ವರದಿ, ವಿಚಾರಣಾ ವರದಿಯ ಕುರಿತಾಗಿ ಮಾನ್ಯ ಉಪ ಲೋಕಾಯುಕ್ತರ ಶಿಫಾರಸ್ಸು ಇನ್ನಿತರ ದಾಖಲೆಗಳನ್ನು ಲಗತ್ತಿಸಿ, ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

ಸರ್ಕಾರವು ವಿಚಾರಣಾ ವರದಿ ಹಾಗೂ ಇತರೆ ದಾಖಲೆಗಳನ್ನು ಪರಿಶೀಲಿಸಿರುತ್ತದೆ. ವಿಚಾರಣಾಧಿಕಾರಿಯವರು ಶಿಸ್ತು ಪ್ರಾಧಿಕಾರದ ಪರ 02 ಸಾಕ್ಷಿಗಳು ಹಾಗೂ 12 ದಾಖಲೆಗಳು ಮತ್ತು ಆಪಾದಿತರ ಪರ 6 ದಾಖಲೆಗಳನ್ನು ಪರಿಶೀಲಿಸಿಕೊಂಡು ಅಂತಿಮವಾಗಿ ಸಲ್ಲಿಸಿರುವ ವರದಿಯಲ್ಲಿ ಎಲ್ಲಾ 08 ಜನ ಅಧಿಕಾರಿ/ನೌಕರರ ವಿರುದ್ಧದ ಆರೋಪಗಳು ಇಲಾಖಾ ವಿಚಾರಣೆಯಲ್ಲಿ ಸಾಬೀತಾಗಿರುತ್ತದೆ ಎಂದು ನಿರ್ಣಯಿಸಿ ವರದಿ ಸಲ್ಲಿಸಿರುತ್ತಾರೆ. ಮಾನ್ಯ ಉಪ ಲೋಕಾಯುಕ್ತರವರು ಸದರಿ ವಿಚಾರಣಾ ವರದಿಯನ್ನು ಪರಿಶೀಲಿಸಿ ವಿಚಾರಣಾ ವರದಿಯಲ್ಲಿ ಯಾವುದೇ ಆಕ್ಷೇಪಣೀಯವಾದ ಅಂಶಗಳು ಕಂಡುಬಂದಿಲ್ಲದ ಕಾರಣ ವಿಚಾರಣಾ ವರದಿಗೆ ಸಹಮತಿಸಿ ಸಾಬೀತಾದ ಆರೋಪದ ಗಂಭೀರತೆಗೆ ಅನುಗುಣವಾಗಿ ದಂಡನೆಯನ್ನು ವಿಧಿಸಲು ಮೇಲೆ ಓದಲಾದ ಕ್ರಮಾಂಕ (3) ರ ದಿನಾಂಕ: 01.02.2021 ರಲ್ಲಿ ಸರ್ಕಾರಕ್ಕೆ ಶಿಫಾರಸ್ಸು ಮಾಡಿರುತ್ತಾರೆ.

ಮೇಲ್ಕಂಡ 08 ಜನ ಆಪಾದಿತರ ಪೈಕಿ ಪೈಕಿ ಕ್ರ.ಸಂ.1 & 2 ರ ಅಧಿಕಾರಿಗಳಾದ ಶ್ರೀ ಬಿ.ಆರ್.ಗೌಡೂರ, ಹಿಂದಿನ ಪ್ರಭಾರಿ ಕಾ.ಇಂ., ಮತ್ತು ಶ್ರೀ ಮಲ್ಲಿಕಾರ್ಜುನ ಸಾಹು, ಹಿಂದಿನ ಕಾ.ಇಂ., ಇವರುಗಳು ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳಾಗಿದ್ದು, ಪ್ರಸ್ತುತ ಸೇವೆಯಿಂದ ನಿವೃತ್ತಿ ಹೊಂದಿರುವುದರಿಂದ ಸದರಿಯವರಿಗೆ ದಂಡನೆಯನ್ನು ವಿಧಿಸಲು ಅವರ ಸಕ್ಷಮ ಪ್ರಾಧಿಕಾರವಾದ ಲೋಕೋಪಯೋಗಿ ಇಲಾಖೆಯು ಹಾಗೂ ಕ್ರ.ಸಂ.7 & 8 ರ ಅಧಿಕಾರಿ/ನೌಕರಾರದ ಶ್ರೀ ರಾಮಚಂದ್ರ, ಕ್ಷೇತ್ರ ಶಿಕ್ಷಣಾಧಿಕಾರಿಗಳು ಮತ್ತು ಶ್ರೀಮತಿ ಸುಜಾತ.ಎಂ.,ತರಬೇತಿ ಪದವೀಧರ ಶಿಕ್ಷಕಿ ಇವರುಗಳು ಶಿಕ್ಷಣ ಇಲಾಖೆಯ ಅಧಿಕಾರಿಗಳಾಗಿದ್ದು, ಸದರಿಯವರಿಗೆ ದಂಡನೆ ವಿಧಿಸಲು ಅವರ ಸಕ್ಷಮ ಪ್ರಾಧಿಕಾರವಾದ ಶಿಕ್ಷಣ ಇಲಾಖೆಯು ಕ್ರಮವಹಿಸಬೇಕಾಗುತ್ತದೆ. ಆದ್ದರಿಂದ ಮಾನ್ಯ ಉಪ ಲೋಕಾಯುಕ್ತರವರ ಶಿಫಾರಸ್ಸು, ವಿಚಾರಣಾಧಿಕಾರಿಗಳ ವರದಿ ಮತ್ತು ದಾಖಲೆಗಳ ಪ್ರತಿಗಳನ್ನು ಲೋಕೋಪಯೋಗಿ ಇಲಾಖೆಗೆ ಮತ್ತು ಶಿಕ್ಷಣ ಇಲಾಖೆಗಳಿಗೆ ಕಳುಹಿಸಿ, ಈ ಬಗ್ಗೆ ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳುವಂತೆ ಕೋರಲಾಗಿರುತ್ತದೆ. ಸೇವೆಯಲ್ಲಿರುವ ಇನ್ನುಳಿದ ಈ ಕೆಳಕಂಡ 04 ಜನ ಆಪಾದಿತರುಗಳಿಗೆ ದಂಡನೆ ವಿಧಿಸಲು ಗ್ರಾ.ಅ.ಪಂ.ರಾಜ್ ಇಲಾಖೆಯು ಅಧಿಕಾರ ವ್ಯಾಪ್ತಿಯನ್ನು ಹೊಂದಿರುತ್ತದೆ.

1. ಶ್ರೀ ಜಿ.ಎನ್.ಪ್ರಕಾಶ್, ಹಿಂದಿನ ಸ.ಕಾ.ಇಂ.
2. ಶ್ರೀ ಶರಣೇಗೌಡ, ಹಿಂದಿನ ಕಿರಿಯ ಇಂಜಿನಿಯರ್
3. ಶ್ರೀ ಮಹಮ್ಮದ್ ಮೊಹಿಸಿನ್, ಹಿಂದಿನ ಕಿರಿಯ ಇಂಜಿನಿಯರ್
4. ಶ್ರೀ ಬಾಬುರಾವ್, ಹಿಂದಿನ ಕಿರಿಯ ಇಂಜಿನಿಯರ್

ವಿಚಾರಣಾ ವರದಿಯನ್ನು ಆಧರಿಸಿ ಮುಂದಿನ ಕ್ರಮ ಕೈಗೊಳ್ಳುವ ಪೂರ್ವದಲ್ಲಿ ಮೇಲ್ಕಂಡ 04 ಜನ ಆಪಾದಿತರುಗಳಿಗೆ ಇಲಾಖಾ ವತಿಯಿಂದ 2ನೇ ಕಾರಣ ಕೇಳುವ ನೋಟೀಸ್ ಅನ್ನು ಮೇಲೆ ಓದಲಾದ ಕ್ರಮಾಂಕ (4) ರ ದಿನಾಂಕ: 09.04.2021ರಲ್ಲಿ ಜಾರಿ ಮಾಡಲಾಗಿರುತ್ತದೆ. ಮೇಲ್ಕಂಡ ವಿಚಾರಣಾ ವರದಿಗೆ ಎದುರಾಗಿ ಆಪಾದಿತ 04 ಜನ ಅಧಿಕಾರಿ/ನೌಕರರು ಮೇಲೆ ಓದಲಾದ ಕ್ರಮಾಂಕ (5) ರಂತೆ ತಮ್ಮ ಲಿಖಿತ ಹೇಳಿಕೆಯನ್ನು ಸಲ್ಲಿಸಿರುತ್ತಾರೆ.

ಅಪಾದಿತರಾದ ಶ್ರೀ ಜಿ.ಎನ್.ಪ್ರಕಾಶ್, ಸ.ಕಾ.ಇಂ, ಶ್ರೀ ಶರಣೇಗೌಡ, ಕಿ.ಇಂ., ಶ್ರೀ ಮಹಮ್ಮದ್ ಮೊಹಿಸಿನ್,ಕಿ,ಇಂ., ಮತ್ತು ಶ್ರೀ ಬಾಬುರಾವ್, ಕಿ.ಇಂ., ಇವರುಗಳ ವಿರುದ್ಧ 2013-14ನೇ ಸಾಲಿನಲ್ಲಿ ಎನ್.ಆರ್.ಡಿ.ಡಬ್ಲ್ಯೂ.ಪಿ ಯೋಜನೆಯಡಿ ಕ್ರಿಯಾ ಯೋಜನೆಯನ್ನು ಗ್ರಾಮದಲ್ಲಿ ಇಲ್ಲದೇ ಇರುವ ಉರ್ದು ಶಾಲೆಗಳಲ್ಲಿ ಕಾಮಗಾರಿ ಮಾಡಿರುವುದಾಗಿ ಮತ್ತು ಒಂದೇ ಶಾಲೆಗೆ ಎರಡು ಕಾಮಗಾರಿಗಳನ್ನು ಅಳವಡಿಸಿ, ನ್ಯೂನ್ಯತೆಗಳಿರುವ ಕ್ರಿಯಾಯೋಜನೆಯನ್ನು ತಯಾರಿಸಿರುವುದು ಮತ್ತು ಕ್ರಿಯಾ ಯೋಜನೆಯಲ್ಲಿನ ಜಾಗೀರ್ ವೆಂಕಟಾಪುರ ಗ್ರಾಮದ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಕಾಮಗಾರಿಯನ್ನು ಮಾಡಿಸದೆ, ಕಾಮಗಾರಿ ಮಾಡಿದೆ ಎಂದು ಹಣ ಪಾವತಿ ಮಾಡಲು ಸಹಕರಿಸಿದ್ದು, ಹಾಗೂ ಕಾಮಗಾರಿಗಳ ಅಂದಾಜು ಪಟ್ಟಿಯಲ್ಲಿ ನಮೂದಿಸಿದ ಉದ್ದಳತೆಯ ಕೊಳವೆಗಳನ್ನು ಅಳವಡಿಸದೆ ಕಡಿಮೆ ಉದ್ದಳತೆಯ ಕೊಳವೆಗಳನ್ನು ಅಳವಡಿಸಿ ಅಂದಾಜು ಪಟ್ಟಿಯಲ್ಲಿರುವಂತೆ ಭೂಮಿ ಅಗೆತ ಮತ್ತು ಕೊಳವೆ(ಪೈಪ್ ಲೈನ್) ಅಳವಡಿಸುವ ಹಣವನ್ನು ಪಡೆದುಕೊಂಡು ಸರ್ಕಾರದ ಅನುದಾನವನ್ನು ದುರುಪಯೋಗಪಡಿಸಿಕೊಂಡಿರುತ್ತಾರೆ ಎಂಬ ಆರೋಪಗಳು ಇರುತ್ತವೆ.

...4

ಸದರಿ ಆರೋಪಗಳಿಗೆ ಎದುರಾಗಿ ಶ್ರೀ ಜಿ.ಎನ್.ಪ್ರಕಾಶ್, ಹಿಂದಿನ ಸ.ಕಾ.ಇಂ., ಇವರು ಸಲ್ಲಿಸಿರುವ ಲಿಖಿತ ಹೇಳಿಕೆಯಲ್ಲಿ ಸರ್ಕಾರದ ನಿಯಮಾವಳಿ ಅನುಸಾರ ಎಲ್ಲಾ ಶಾಲೆಗಳಿಗೆ ಕುಡಿಯುವ ನೀರಿನ ಕಾಮಗಾರಿಯನ್ನು ಪೂರ್ಣಗೊಳಿಸಿದ್ದು, ಆಯಾ ಶಾಲೆಯ ಮುಖ್ಯೋಪಾಧ್ಯಾಯರಿಂದ ಕಾಮಗಾರಿ ತೃಪ್ತಿಕರವಾಗಿರುವ ಬಗ್ಗೆ ದೃಢೀಕರಣ ಪತ್ರ ಪಡೆದುಕೊಳ್ಳಲಾಗಿರುತ್ತದೆ. ಆದರೆ ಈ ಕಾಮಗಾರಿಯ ಗುಣಮಟ್ಟವನ್ನು ಪರಿಶೀಲಿಸಲು ನೇಮಿಸಿದ್ದ ಲೋಕಾಯುಕ್ತ ಅಧೀಕ್ಷಕರು ಇವರು ತಾಂತ್ರಿಕ ವ್ಯಕ್ತಿಯಾಗಿರದ ಕಾರಣ ಇವರು ಸಲ್ಲಿಸಿರುವ ತನಿಖಾ ವರದಿಯು ಸುಳ್ಳಿನಿಂದ ಕೂಡಿಗುತ್ತದೆ ಎಂದು ಹಾಗೂ ಈ ಕಾಮಗಾರಿಯಲ್ಲಿ ಅನುದಾನ ದುರ್ಬಳಕೆಯಾಗಿದೆ ಎಂದು ಲೋಕಾಯುಕ್ತ ಕಛೇರಿಯಲ್ಲಿ ದೂರನ್ನು ದಾಖಲಿಸಿದ ಶ್ರೀ ಬಸವರಾಜ ಗಾರಲದಿನ್ನಿ ರವರು ತಮ್ಮ ದೂರು ಅರ್ಜಿಯನ್ನು ಹಿಂಪಡೆದಿರುವ ಸಂಬಂಧ ತಮ್ಮ ವಿರುದ್ಧದ ಆರೋಪವನ್ನು ಮುಕ್ತಾಯಗೊಳಿಸುವಂತೆ ಕೋರಿರುತ್ತಾರೆ.

ಶ್ರೀ ಶರಣೇಗೌಡ, ಕಿ.ಇಂ., ಶ್ರೀ ಮಹಮ್ಮದ್ ಮೊಹಿಸಿನ್, ಕಿ.ಇಂ., ಮತ್ತು ಶ್ರೀ ಬಾಬುರಾವ್, ಕಿ.ಇಂ., 03 ಜನ ಅಪಾದಿತರುಗಳು ಸಲ್ಲಿಸಿರುವ ಲಿಖಿತ ಹೇಳಿಕೆಯಲ್ಲಿ, ಕಾಮಗಾರಿಗಳ ಕ್ರಿಯಾ ಯೋಜನೆಯನ್ನು ಜಿಲ್ಲಾ ಪಂಚಾಯತ್ ರಾಯಚೂರು ಇವರು ಕರ್ನಾಟಕ ಗ್ರಾಮ ಸ್ವರಾಜ್ಯ ಮತ್ತು ಪಂಚಾಯತ್ ರಾಜ್ ಕಾಯ್ದೆ, 1993 ರನ್ವಯ ನಿಯಮಾನುಸಾರ ಸಿದ್ಧಪಡಿಸಿರುತ್ತಾರೆಂದು, ತನಿಖಾಧಿಕಾರಿಯವರು ಸ್ಥಳ ಪರಿಶೀಲನೆ ಸಮಯದಲ್ಲಿ ಹಾಜರಿರುವಂತೆ ಅಪಾದಿತ ಅಧಿಕಾರಿ/ನೌಕರರಿಗೆ ಯಾವುದೇ ನೋಟೀಸ್ ಜಾರಿ ಮಾಡದೆ, ಕೊಳವೆ ಬಾವಿಯ ಉದ್ದಳತೆಯನ್ನು ಭೂಮಿಯಿಂದ ಅಗೆದು ಅಳತೆಗಳನ್ನು ಪಡೆಯದೆ, ತಜ್ಞರ ಅಭಿಪ್ರಾಯ ಪಡೆಯದೆ, ಲೋಕಾಯುಕ್ತ ಸಂಸ್ಥೆ ತಾಂತ್ರಿಕ ವಿಭಾಗದ ಅಧಿಕಾರಿಗಳಿಂದ ಪರಿಶೀಲಿಸದೇ ಹಾಗೂ ಶಿಕ್ಷಕರ ಹೇಳಿಕೆ ಪಡೆಯದೇ,ತನಿಖಾ ವರದಿಯನ್ನು ಸಲ್ಲಿಸಿರುವುದು ನ್ಯಾಯ ಸಮ್ಮತವಾಗಿರುವುದಿಲ್ಲವೆಂದು, ಅಲ್ಲದೇ ದೂರುದಾರಾರು ತಮ್ಮ ದೂರಿನಲ್ಲಿ ಶ್ರೀ ಬಿ.ಆರ್.ಗೌಡರ್, ಕಾರ್ಯನಿರ್ವಾಹಕ ಅಭಿಯಂತರರು, ಇವರ ವಿರುದ್ಧ ದೂರು ಸಲ್ಲಿಸಿದ್ದು, ನಮ್ಮಗಳ ವಿರುದ್ಧ ದೂರು ಸಲ್ಲಿಸಿರುವುದಿಲ್ಲವೆಂದು, ಕಾಮಗಾರಿಗಳನ್ನು ನಡೆಸಿದ ಶಾಲೆಗಳ ಸಂಬಂಧಿಸಿದ ಮುಖ್ಯೋಪಾಧ್ಯಾಯರು ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳ ಹೇಳಿಕೆಗಳನ್ನು ಪಡೆದಿರುವುದಿಲ್ಲ. ಆದ್ದರಿಂದ ಇಲಾಖಾ ವಿಚಾರಣಾ ವರದಿಯನ್ನು ಮರು ಪರಿಶೀಲಿಸಿ, ತಮ್ಮ ವಿರುದ್ಧ ಪ್ರಸ್ತಾಪಿಸಿರುವ ದಂಡನೆಯನ್ನು ಕೈಬಿಡಬೇಕೆಂದು ವಿನಂತಿಸಿಕೊಂಡಿರುತ್ತಾರೆ.

ಸರ್ಕಾರವು ಆಪಾದಿತರು ಸಲ್ಲಿಸಿರುವ ಲಿಖಿತ ಹೇಳಿಕೆ, ವಿಚಾರಣಾ ವರದಿ, ಮಾನ್ಯ ಉಪ ಲೋಕಾಯುಕ್ತರವರು ಸಲ್ಲಿಸಿರುವ ಶಿಫಾರಸ್ಸು ಹಾಗೂ ಸಂಬಂಧಪಟ್ಟ ಎಲ್ಲಾ ದಾಖಲೆಗಳನ್ನು ಪರಿಶೀಲಿಸಿದೆ. ಲೋಕಾಯುಕ್ತ ತನಿಖಾಧಿಕಾರಿಯವರು ಖುದ್ದು ಪರಿಶೀಲನೆ ನಡೆಸಿ ಸಲ್ಲಿಸಿರುವ ವರದಿಯಲ್ಲಿ, ಆರೋಪಿತರ ವಿರುದ್ಧ 2013-14ನೇ ಸಾಲಿನಲ್ಲಿ ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರು ಸರಬರಾಜು ಯೋಜನೆಯಡಿಯಲ್ಲಿ ಉರ್ದು ಶಾಲೆ ಇಲ್ಲದ ಗ್ರಾಮಗಳಲ್ಲಿ ಹಾಗೂ ಒಂದೇ ಶಾಲೆಗೆ ಎರಡು ಕಾಮಗಾರಿಗಳನ್ನು ಅಳವಡಿಸಿ ನ್ಯೂನತೆಯಿಂದ ಕೂಡಿರುವ ಕ್ರಿಯಾಯೋಜನೆಯನ್ನು ಸಿದ್ಧಪಡಿಸಿರುವುದು, ಜಾಗೀರ್ ವೆಂಕಟಾಪುರ ಗ್ರಾಮದ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಕಾಮಗಾರಿಯನ್ನು ನಿರ್ವಹಿಸದೇ ಇದ್ದರೂ ಸಹ ಕಾಮಗಾರಿ ನಿರ್ವಹಿಸಲಾಗಿದೆ ಎಂದು ಹಣ ಪಾವತಿಸಿರುವುದು ಹಾಗೂ ಈ ಕೆಳಕಂಡ ಕಾಮಗಾರಿಗಳ ಅಂದಾಜು ಪಟ್ಟಿಯಲ್ಲಿ ನಮೂದಿಸಿರುವ ಉದ್ದಳತೆಯ ಪೈಪ್‌ಲೈನ್‌ನ್ನು ಅಳವಡಿಸದೇ ಕಡಿಮೆ ಉದ್ದಳತೆಯ ಪೈಪ್‌ಲೈನ್‌ನ್ನು ಅಳವಡಿಸಿ, ಅಂದಾಜು ಪಟ್ಟಿಯಲ್ಲಿರುವಂತೆ ಭೂಮಿ ಅಗೆತ ಮತ್ತು ಪೈಪ್‌ಲೈನ್ ಅಳವಡಿಸಿದೆ ಎಂದು ನಮೂದಿಸಿ ಸರ್ಕಾರದ ಹಣ ದುರುಪಯೋಗ ಮಾಡಿಕೊಂಡಿರುವ ಆರೋಪಗಳು ಕಂಡುಬಂದಿರುತ್ತವೆ :-

1. ರಾಯಚೂರು ತಾಲ್ಲೂಕಿನ ಅರಳಿಬೆಂಚಿ ಗ್ರಾಮದಲ್ಲಿ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ (ಉರ್ದು) -ನೀರು ಸರಬರಾಜು ಕಾಮಗಾರಿ

2. ರಾಯಚೂರು ತಾಲ್ಲೂಕಿನ ಜಾಲಿಬೆಂಚಿ ಗ್ರಾಮದಲ್ಲಿ ಹಿರಿಯ ಪ್ರಾಥಮಿಕ ಶಾಲೆ - ನೀರು ಸರಬರಾಜು ಕಾಮಗಾರಿ.
3. ರಾಯಚೂರು ತಾಲ್ಲೂಕಿನ ಜಾಲಿಬೆಂಚಿ ಗ್ರಾಮದಲ್ಲಿ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ - ನೀರು ಸರಬರಾಜು ಕಾಮಗಾರಿ.
4. ರಾಯಚೂರು ತಾಲ್ಲೂಕಿನ ಮೂಡಲದಿನ್ನಿ ಗ್ರಾಮದಲ್ಲಿ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ (ಉರ್ದು) - ನೀರು ಸರಬರಾಜು ಕಾಮಗಾರಿ.
5. ರಾಯಚೂರು ತಾಲ್ಲೂಕಿನ ಫತೇಪುರ ಗ್ರಾಮದಲ್ಲಿ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ (ಉರ್ದು) - ನೀರು ಸರಬರಾಜು ಕಾಮಗಾರಿ.
6. ರಾಯಚೂರು ತಾಲ್ಲೂಕಿನ ಜಾಗೀರ ವೆಂಕಟಾಪುರ ಗ್ರಾಮದಲ್ಲಿ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ (ಉರ್ದು) - ನೀರು ಸರಬರಾಜು ಕಾಮಗಾರಿ.
7. ರಾಯಚೂರು ತಾಲ್ಲೂಕಿನ ಅರಳಪ್ಪನಹುಡಾ ಗ್ರಾಮದಲ್ಲಿ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ (ಉರ್ದು) - ನೀರು ಸರಬರಾಜು ಕಾಮಗಾರಿ.

ಸದರಿ ಆರೋಪಗಳ ಕುರಿತು ವಿಚಾರಣಾಧಿಕಾರಿಗಳು ಹಲವಾರು ದಾಖಲೆ ಮತ್ತು ಸಾಕ್ಷಿಗಳ ಹೇಳಿಕೆಗಳನ್ನು ಪರಿಗಣಿಸಿರುತ್ತಾರೆ. ಪ್ರಮುಖವಾಗಿ ಕಾಮಗಾರಿಗಳ ಸ್ಥಳ ತಪಾಸಣೆ ನಡೆಸಿದ ಪೊಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ ಇವರ ವರದಿಯನ್ನು ಸಹ ಇಲಾಖಾ ವಿಚಾರಣೆಯಲ್ಲಿ ಪರಿಗಣಿಸಿ ಆರೋಪಗಳ ಕುರಿತು ನಿರ್ಣಯಿಸಲಾಗಿದೆ. ಹಾಗಾಗಿ ಇಲಾಖಾ ವಿಚಾರಣೆಯಲ್ಲಿ ಯಾವುದೇ ಆಕ್ಷೇಪಣಾರ್ಹವಾದ ಅಂಶಗಳು ಕಂಡು ಬರುವುದಿಲ್ಲ.

ಸದರಿ ವಿಚಾರಣಾ ವರದಿಗೆ ಪ್ರತಿಯಾಗಿ ಆಪಾದಿತರು ಸಲ್ಲಿಸಿರುವ ಲಿಖಿತ ಹೇಳಿಕೆಗಳಲ್ಲಿ ತನಿಖಾ ವರದಿಯನ್ನು ಅಲ್ಲಗಳೆಯುವಂತೆ ಕೋರಿರುತ್ತಾರೆ. ಆದರೆ, ಕಾಮಗಾರಿಗಳ ಅನುಷ್ಠಾನದಲ್ಲಿ ಆಗಿರುವ ಲೋಪಗಳ ಬಗ್ಗೆ ತನಿಖಾಧಿಕಾರಿಯವರು ಸಲ್ಲಿಸಿರುವ ವರದಿಯಲ್ಲಿನ ಅಂಶಗಳ ಬಗ್ಗೆ ಯಾವುದೇ ಆಕ್ಷೇಪಣೆಯನ್ನು ವ್ಯಕ್ತಪಡಿಸಿರುವುದಿಲ್ಲ. ಅಲ್ಲದೇ, ತಮ್ಮ ಲಿಖಿತ ಹೇಳಿಕೆಗೆ ಪೂರಕವಾಗಿ ಯಾವುದೇ ದಾಖಲೆಗಳನ್ನು ಸಲ್ಲಿಸಿರುವುದಿಲ್ಲ. ಹಾಗಾಗಿ ಆಪಾದಿತರ ಲಿಖಿತ ಹೇಳಿಕೆಗಳಲ್ಲಿ ಯಾವುದೇ ಪರಿಗಣನಾರ್ಹವಾದ ಅಂಶಗಳು ಕಂಡುಬರುವುದಿಲ್ಲ. ಆದ್ದರಿಂದ, ವಿಚಾರಣಾಧಿಕಾರಿಯವರ ವರದಿಯನ್ನು ಒಪ್ಪಿ, ಸಾಬೀತಾದ ಆರೋಪಗಳಿಗನುಗುಣವಾಗಿ ಶ್ರೀ ಜಿ.ಎನ್.ಪ್ರಕಾಶ್, ಹಿಂದಿನ ಸ.ಕಾ.ಇಂ., ಶ್ರೀ ಶರಣೇಗೌಡ, ಹಿಂದಿನ ಕಿರಿಯ ಇಂಜಿನಿಯರ್, ಶ್ರೀ ಮೊಮ್ಮದ್ ಮೋಸಿನ್, ಹಿಂದಿನ ಕಿರಿಯ ಇಂಜಿನಿಯರ್ ಹಾಗೂ ಶ್ರೀ ಬಾಬುರಾವ್, ಹಿಂದಿನ ಕಿರಿಯ ಇಂಜಿನಿಯರ್ ಇವರುಗಳಿಗೆ ದಂಡನೆ ವಿಧಿಸಲು ಸರ್ಕಾರವು ತೀರ್ಮಾನಿಸಿರುತ್ತದೆ. ಆದ್ದರಿಂದ ಈ ಕೆಳಕಂಡ ಆದೇಶ.

<u>ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 24 ಇಎನ್‌ಕ್ಯೂ 2021,</u>

<u>ಬೆಂಗಳೂರು, ದಿನಾಂಕ:07.03. 2022</u>

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಈ ಕೆಳಕಂಡ ಆಪಾದಿತರುಗಳ ವಿರುದ್ಧ ಸಾಬೀತಾದ ಆರೋಪಗಳ ಗಂಭೀರತೆಗೆ ಅನುಗುಣವಾಗಿ ಈ ಕೆಳಕಂಡಂತೆ ಅವರುಗಳ ಹೆಸರಿನ ಮುಂದೆ ನಮೂದಿಸಿರುವಂತೆ ದಂಡನೆ ವಿಧಿಸಿ ಆದೇಶಿಸಿದೆ.

| ಕ್ರ.ಸಂ. | ಆಪಾದಿತರ ಹೆಸರು | ದಂಡನೆ ಸ್ವರೂಪ |
|---|---|---|
| 1. | ಶ್ರೀ ಜಿ.ಎನ್.ಪ್ರಕಾಶ್, ಹಿಂದಿನ ಸ.ಕಾ.ಇಂ., ಪಂ.ರಾ.ಇಂ. ಉಪವಿಭಾಗ, ರಾಯಚೂರು | ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 8(iii)ರ ಅನುಸಾರ ಸದರಿಯವರ ಕಾಲಿಕ ವೇತನ ಶ್ರೇಣಿಯಲ್ಲಿ ಮೂರು ವಾರ್ಷಿಕ ವೇತನ ಬಡ್ತಿಗಳನ್ನು ಸಂಚಿತ ಪರಿಣಾಮ ಸಹಿತವಾಗಿ ತಡೆಹಿಡಿಯುವುದು. |

| | | |
|---|---|---|
| 2. | ಶ್ರೀ ಶರಣೇಗೌಡ, ಹಿಂದಿನ ಕಿರಿಯ ಇಂಜಿನಿಯರ್, ಪಂ.ರಾ.ಇಂ. ವಿಭಾಗ,ರಾಯಚೂರು | ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 8(iii)ರ ಅನುಸಾರ ಸದರಿಯವರ ಕಾಲಿಕ ವೇತನ ಶ್ರೇಣಿಯಲ್ಲಿ ಮೂರು ವಾರ್ಷಿಕ ವೇತನ ಬಡ್ತಿಗಳನ್ನು ಸಂಚಿತ ಪರಿಣಾಮ ಸಹಿತವಾಗಿ ತಡೆಹಿಡಿಯುವುದು. |
| 3. | ಶ್ರೀ ಮೊಹಮ್ಮದ್ ಮೋಸಿನ್, ಹಿಂದಿನ ಕಿರಿಯ ಇಂಜಿನಿಯರ್, ಪಂ.ರಾ.ಇಂ. ವಿಭಾಗ, ರಾಯಚೂರು | ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 8(iii)ರ ಅನುಸಾರ ಸದರಿಯವರ ಕಾಲಿಕ ವೇತನ ಶ್ರೇಣಿಯಲ್ಲಿ ಮೂರು ವಾರ್ಷಿಕ ವೇತನ ಬಡ್ತಿಗಳನ್ನು ಸಂಚಿತ ಪರಿಣಾಮ ಸಹಿತವಾಗಿ ತಡೆಹಿಡಿಯುವುದು. |
| 4. | ಶ್ರೀ ಬಾಬುರಾವ್, ಹಿಂದಿನ ಕಿರಿಯ ಇಂಜಿನಿಯರ್, ಪಂ.ರಾ.ಇಂ.ವಿಭಾಗ, ರಾಯಚೂರು. | ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 8(ivಎ)ರ ಅನುಸಾರ ಸದರಿಯವರ ಕಾಲಿಕ ವೇತನ ಶ್ರೇಣಿಯಲ್ಲಿ ಮೂರು ಹಂತಗಳನ್ನು 03 ವರ್ಷಗಳವರೆಗೆ ಕೆಳಗಿಳಿಸುವುದು ಹಾಗೂ ಸದರಿ ದಂಡನಾವಧಿಯಲ್ಲಿ ವಾರ್ಷಿಕ ವೇತನ ಬಡ್ತಿಗೆ ಅರ್ಹರಿರುವುದಿಲ್ಲ. |

ಮೇಲ್ಕಂಡಂತೆ ಆರೋಪಿತರಿಗೆ ವಿಧಿಸಲಾದ ದಂಡನೆಯನ್ನು ಜಾರಿಗೊಳಿಸಲು ಜರೂರು ಕ್ರಮ ತೆಗೆದುಕೊಳ್ಳುವಂತೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ರಾಯಚೂರು ಇವರಿಗೆ ಸೂಚಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶನುಸಾರ
ಮತ್ತು ಅವರ ಹೆಸರಿನಲ್ಲಿ

ಕೆ. ನದೀಮ್ 7/3

(ಕೆ.ನದೀಮ್ ಅಹ್ಮದ್)
ಸರ್ಕಾರದ ಅಧೀನ ಕಾರ್ಯದರ್ಶಿ (ಸೇವೆಗಳು-ಎ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

**ಇವರಿಗೆ:**

1. ಮಹಾಲೇಖಪಾಲರು (ಲೆಕ್ಕ ಪತ್ರ 1 &2)/(ಆಡಿಟ್), ಕರ್ನಾಟಕ, ಬೆಂಗಳೂರು.
2. ನಿಬಂಧಕರು, ಕರ್ನಾಟಕ ಲೋಕಾಯುಕ್ತ ಕಛೇರಿ, ಬಹುಮಹಡಿ ಕಟ್ಟಡ, ಬೆಂಗಳೂರು.
3. ಅಪರ ನಿಬಂಧಕರು, ವಿಚಾರಣೆಗಳು-16, ಕರ್ನಾಟಕ ಲೋಕಾಯುಕ್ತ ಕಛೇರಿ, ಬಹುಮಹಡಿಗಳ ಕಟ್ಟಡ. ಬೆಂಗಳೂರು.
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ ಬೆಂಗಳೂರು.
5. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ. ಬೆಂಗಳೂರು.
6. ಆಯುಕ್ತರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಬೆಂಗಳೂರು.
7. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಗ್ರಾಮೀಣ ಅಭಿವೃದ್ಧಿ ಭವನ, ಆನಂದರಾವ್ ವೃತ್ತ, ಬೆಂಗಳೂರು.
8. ಮುಖ್ಯ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಬೆಂಗಳೂರು.

...7

9. ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು(ದಕ್ಷಿಣ), ಕೆ.ಆರ್.ವೃತ್ತ, ಬೆಂಗಳೂರು.
10. ಸರ್ಕಾರದ ಅಧೀನ ಕಾರ್ಯದರ್ಶಿ,ಲೋಕೋಪಯೋಗಿ ಇಲಾಖೆ (ಸೇವೆಗಳು-ಎ & ಸಿ).
11. ಸರ್ಕಾರದ ಅಧೀನ ಕಾರ್ಯದರ್ಶಿ,ಗ್ರಾ.ಅ.ಪಂ. ರಾಜ್ ಇಲಾಖೆ (ಸೇವೆಗಳು-ಬಿ & ಸಿ).
12. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ರಾಯಚೂರು.
13. ಸಂಬಂಧಿಸಿದ ಅಧಿಕಾರಿ/ನೌಕರರಿಗೆ – ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ರಾಯಚೂರು ರವರ ಮುಖಾಂತರ.

---

**ಪ್ರತಿಯನ್ನು ಮಾಹಿತಿಗಾಗಿ:**

1. ಮಾನ್ಯ ಗ್ರಾ.ಅ.ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿಯವರು
2. ಗ್ರಾ.ಅ.ಪಂ.ರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿ/ಜಂಟಿ ಕಾರ್ಯದರ್ಶಿ/ ಇವರ ಆಪ್ತ ಕಾರ್ಯದರ್ಶಿ/ಆಪ್ತ ಸಹಾಯಕರು.
3. ಮೇಲ್ವಿಚಾರಕರು, ಗಣಕಯಂತ್ರ ವಿಭಾಗ, ಗ್ರಾ.ಅ.ಪಂ.ರಾಜ್ ಇಲಾಖೆ ಇವರಿಗೆ ವೆಬ್‌ಸೈಟ್‌ನಲ್ಲಿ ಪ್ರಕಟಿಸುವ ಸಲುವಾಗಿ.
4. ಹೆಚ್ಚುವರಿ ಪ್ರತಿ:ರಕ್ಷಾ ಕಡತ :